ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಎದ್ದು ನಿಂತು ಇದು ನನ್ನ ಗಮನಕ್ಕೆ ಬಂದಿದೆ. ನಾನು ಸದನದ ಎಲ್ಲಾ ಸದಸ್ಯರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇನೆ, ಆದಷ್ಟು ಬೇಗ ಅದರ ಬಗ್ಗೆ ಕ್ರಮಕೈಗೊಳ್ಳುತ್ತೇನೆಂದು ಸಭಾ ನಾಯಕರು ಹೇಳಿರುವುದರಿಂದ ನಾವು ಸತ್ ಸಂಪ್ರದಾಯದಂತೆ ಅವರ ಮಾತಿಗೆ ಬೆಲೆ ಕೊಟ್ಟು ಈ ವಿಷಯವನ್ನು ಇಲ್ಲಿಗೆ ಮುಗಿಸಿ, ಬೇರೆ ವಿಷಯದ ಬಗ್ಗೆ ಮುಂದುವರೆಯೋಣ.

(ಉ) ಶಾಸಕರಿಗೆ ಕ್ಷೇತ್ರಾಭಿವೃದ್ಧಿ ಕಚೇರಿಯಿಂದ ವಾಹನ ಒದಗಿಸುವುದು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಇಷ್ಟೇ, ಕರ್ನಾಟಕ ಸರ್ಕಾರದ ಸಚಿವಾಲಯವು, 1986ನೇ ಇಸವಿಯಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಶಾಸಕರುಗಳು ಕ್ಷೇತ್ರಾಭಿವೃದ್ಧಿ ಕಛೇರಿಯ ವಾಹನ (ಜೀಪ್) ನಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ಇನ್ನಿತರ ಸ್ಥಳೀಯ ಅಧಿಕಾರಿಗಳೊಂದಿಗೆ ತಿಂಗಳಲ್ಲಿ ಕೆಲವು ದಿನಗಳ ಕಾಲ ಪ್ರವಾಸ ಮಾಡಲು ಅಂದರೆ ಹತ್ತು ದಿವಸಗಳ ಕಾಲ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಒಬ್ಬ ಶಾಸಕರ ಜೊತೆಯಲ್ಲಿ ಅವರು ಕ್ಷೇತ್ರದಲ್ಲಿ ಎಲ್ಲಿಗೆ ಹೋಗುತ್ತಾನೆ ಅಲ್ಲಿ ಹೋಗಿ ಅವರೊಂದಿಗೆ ಸಹಕರಿಸಿ ಆ ಕ್ಷೇತ್ರದ ಕೆಲಸಕಾರ್ಯಗಳ ಅಭಿವೃದ್ಧಿಯ ಬಗ್ಗೆ ಪರಿಶೀಲನೆ ಮಾಡಬೇಕೆಂದು ಸುತ್ತೋಲೆಯಾಗಿದೆ. ಆದರೆ ಇವೊತ್ತಿನ ಪರಿಸ್ಥಿತಿಯಲ್ಲಿ ಈ ಒಂದು ಸುತ್ತೋಲೆಗೆ ಒಂದು ಕಿಂಚಿತ್ತು, ಒಂದು ಕವಡೆಯಷ್ಟೂ ಬೆಲೆ ಇಲ್ಲ. ನಾನು ಇವತ್ತು ಇಲ್ಲಿ ಪಕ್ಷ ಭೇದ ಮರೆತು ಎಲ್ಲಾ ಶಾಸಕರ ಪರವಾಗಿ ಮಾತನಾಡುತ್ತಿದ್ದೇನೆ. ಅನೇಕ ಸಾರಿ ಈ ಸದನದಲ್ಲಿ ಬಹಳಷ್ಟು ಶಾಸಕರು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇವೊತ್ತು ಏನಾಗಿದೆ ಎಂದರೆ ಕ್ಷೇತ್ರದ ಅಧಿಕಾರಿಗಳಿಗೆ ಅವರು ಇಚ್ಛಿಬಂದ ಹಾಗೆ ಒಂದು ರೀತಿ ವ್ಯತಿರಿಕ್ತವಾಗಿ ನಡೆಯುತ್ತಿದ್ದಾರೆ. ಶಾಸಕರುಗಳಿಗೆ ಒಂದು ಬೇರೆ ವ್ಯವಸ್ಥೆ, ಅಧಿಕಾರಿಗಳಿಗೆ ಒಂದು ರೀತಿ ಬೇರೆ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆ ಬಹಳ ಅಪಾಯಕಾರಿಯಾದ ಬೆಳವಣಿಗೆ. ನಾವು ಸಾರ್ವಜನಿಕವಾಗಿ ಕೆಲಸ ಮಾಡತಕ್ಕಂಥ ಶಾಸಕರುಗಳಿಗೆ ಅಲ್ಲಿಯ ಕ್ಷೇತ್ರದ ಅಧಿಕಾರಿಗಳು ಸಹಕಾರ ನೀಡಬೇಕು. ಒಂದು ತಿಂಗಳಿಗೆ ಹತ್ತು ದಿನಗಳ ಕಾಲ ಶಾಸಕರುಗಳ ಜೊತೆಯಲ್ಲಿ ಅವರು ಎಲ್ಲೆಲ್ಲಿ ಹೋಗುತ್ತಾರೆ ತಮ್ಮ ಕ್ಷೇತ್ರದಲ್ಲಿ ಏನು ಕೆಲಸ ಮಾಡುತ್ತಾರೆ ಅದಕ್ಕೆ ಸಹಕರಿಸಿ ಕ್ಷೇತ್ರದ ಅಧಿಕಾರಿಗಳು ಅವರ ಜೊತೆಗೆ ಹೋಗುವುದು ಮತ್ತು ಅವರಿಗೆ ಜೀಪ್ ಕೊಡಬೇಕು ಎನ್ನತಕ್ಕಂಥ ಸುತ್ತೋಲೆಯಲ್ಲಿ ನೀವೇ ಹೇಳಿದ್ದೀರಿ. ಅದಕ್ಕೆ ಇನ್ನೂ ಉನ್ನತವಾದ ತಿದ್ದುಪಡಿಗಳು ಆಗಬೇಕು. ಈ ಬಗ್ಗೆ ಆ ಕ್ಷೇತ್ರದ ಶಾಸಕರು ಯಾರೇ ಇರಲಿ ಅವರು ಯಾವುದೇ ಪಕ್ಷದವರಾಗಿರಲಿ, ಆದರೆ ಇತ್ತೀಚಿನ ದಿನಗಳಲ್ಲಿ ಏನಾಗಿದೆ ಕ್ಷೇತ್ರದ ಅಧಿಕಾರಿಗಳು ತಮಗೆ ಇಚ್ಛಿ ಬಂದ ಹಾಗೆ ವರ್ಗ ಮಾಡಿಸಿಕೊಂಡು ಬರಬಹುದು, ನಮಗೆ ಇಚ್ಛಿ ಬಂದ ಹಾಗೆ ಇರುತ್ತೇನೆ ಈ ಶಾಸಕರನ್ನು ಕಟ್ಟಿಕೊಂಡು ಏನಾಗಬೇಕು ಎನ್ನುವಂತೆ ಒಂದು ದೌರ್ಜನ್ಯದ ರೀತಿಯಲ್ಲಿ ನಡೆಯುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಒಬ್ಬ ಶಾಸಕನಿಗೆ ಅಲ್ಲಿರತಕ್ಕಂಥ ಕೆಲಸ, ಆ ಕ್ಷೇತ್ರದ ವ್ಯಾಪ್ತಿಗೆ ಬರತಕ್ಕಂಥ ಕೆಲಸ ಅವರು ಮಾಡಲೇಬೇಕು. ಅದಕ್ಕಾಗಿ ಅವರು ಅಧಿಕಾರಿಗಳು ಇರಲಿ ಬಿಡಲಿ ಕ್ಷೇತ್ರಕ್ಕೆ ಹೋಗುತ್ತಾರೆ. ನಾನು ಕೂಡ 224 ಕಿ.ಮೀ. ಇರತಕ್ಕಂಥ ನನ್ನ ಕ್ಷೇತ್ರಕ್ಕೆ ಪ್ರತಿ ಶನಿವಾರ ಹೋಗು ಭಾನುವಾರ ಬರತಕ್ಕಂಥದ್ದನ್ನು

ಮಾಡುತ್ತೇನೆ. ಈ ರೀತಿ ಅನೇಕ ಶಾಸಕರುಗಳು ಮಾಡುತ್ತಾರೆ. ಆದರೆ ಇವೊತ್ತು ಯಾವುದೇ ಅಧಿಕಾರಿಗಳಾಗಲಿ, ಅವರು ತಹಸೀಲ್ದಾರರೇ ಇರಬಹುದು, ಎ.ಇ.ಇ. ಇರಬಹುದು, ಕ್ಷೇತ್ರಾಭಿವೃದ್ಧಿ ಅಧಿಕಾರಿ ಇರಬಹುದು, ಇ.ಓ. ಇರಬಹುದು ಇವರುಗಳಿಗೆ ಏನಾಗಿದೆ ಎಂದರೆ ಇವರಿಗೆ ಯಾವುದೇ ರೀತಿಯ ಲಂಗು ಲಗಾಮು ಇಲ್ಲ. ಇದನ್ನು ಒಂದು ಹಿಡಿತದಲ್ಲಿ ತರಬೇಕು. ಇಲ್ಲದೇ ಹೋದರೆ ಮುಂದೆ ತೊಂದರೆಯಾಗುತ್ತದೆ. ಈ ಸಾರಿ ತಾವು ವರ್ಗಾವಣೆಗೆ ಕೈ ಹಾಕಿಲ್ಲ. ಆದರೆ ಕೆಲವು ತಾಲ್ಲೂಕುಗಳಲ್ಲಿ ತಾವು ಬರೆದಿರತಕ್ಕಂಥ ಪತ್ರಕ್ಕೆ ಬೆಲೆ ಕೊಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಯಾವುದೇ ಸಚಿ, ತಮ್ಮ ಸಹಿಯನ್ನು ಕೂಡ ಫೋರ್ಜರಿ ಮಾಡಿದಂಥ....

ಅಧ್ಯಕ್ಷರು: ತಾವು ಈಗ ಪ್ರಸ್ತಾವ ಮಾಡಿದ್ದೀರಿ ಸಾಕು. ಈಗ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ನೋಡೋಣ.

ಶ್ರೀ ಜೆ.ಹೆಚ್. ಪಟೇಲ್:- ಅವರ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಹತ್ತು ದಿವಸಗಳ ಕಾಲ ಅವರ ವಾಹನವನ್ನು ಕೊಡಬೇಕು ಎಂದು ಇದೆ. ಆದರೆ ಅವರ ಜೊತೆಯಲ್ಲಿ ಹೋಗಬೇಕು ಎಂದು ಇರಲಿಕ್ಕಿಲ್ಲ.

ಶ್ರೀ ವಾಟಾಳ್ ನಾಗರಾಜ್: ಇಲ್ಲಿದೆ. ಅದನ್ನು ಓದುತ್ತೇನೆ. ಶಾಸಕರುಗಳು...

ಶ್ರೀ ಜೆ.ಹೆಚ್. ಪಟೇಲ್: ಆ ರೀತಿ ಇದ್ದರೆ ಅದಕ್ಕೆ ತಕ್ಕಂತೆ ಇನ್‌ಸ್ಟ್ರಕ್ಷನ್ಸ್ ಕೊಡುತ್ತೇವೆ. ಆದರೆ ನೀವೇ ಹೇಳಿದ ನಾನು ಭಾನುವಾರ ಹೋಗುತ್ತೇನೆಂದು ನೀವು ಭಾನುವಾರ ಹೋದರೆ...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಎಲ್ಲರೂ ಭಾನುವಾರ ಹೋಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ಅಲ್ಲ ಅಲ್ಲ ನಾನು ಆ ರೀತಿಯಲ್ಲಿ ಹೇಳಲಿಲ್ಲ, ನಾನು ಹೇಳಿದ್ದು, ನಾನು ಶನಿವಾರ ಹೋಗಿ ಭಾನುವಾರ ಬರುತ್ತೇನೆಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಸ್ವಲ್ಪ ಮೈಲ್ಡ್ ಆಗಿರುವುದರಿಂದ ಅವರು ನಿಮ್ಮ ಮೇಲೆ ಅಟ್ಯಾಕ್ ಮಾಡುತ್ತಿದ್ದಾರೆ. ನೀವು ಸ್ವಲ್ಪ ಜೋಕ್ ಆಗಿ ಹೇಳಿ, ಆಗ ನೋಡಿ.

ಅಧ್ಯಕ್ಷರು: ನೀವು ಯಾರು ಏನು ಪ್ರಯತ್ನ ಮಾಡಿದರೂ ವಾಟಾಳರನ್ನು ಮುಖ್ಯಮಂತ್ರಿಗಳ ವಿಚಾರದಲ್ಲಿ ಗಂಡಸಾಗಿ ಇಲ್ಲದೇ ಇರುವುದಕ್ಕೆ ನಾವು ವ್ಯವಸ್ಥೆ ಮಾಡಿದ್ದೇವೆ. ಆದ್ದರಿಂದ ಅದು ಸಾಧ್ಯವಿಲ್ಲ. ಈಗ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎಂದರೆ ನೀವು ರಜಾ ದಿವಸ ಅಲ್ಲಿಗೆ ಹೋದರೆ ಅಧಿಕಾರಿಗಳು ಅಲ್ಲಿ ಹೇಗೆ ಇರುತ್ತಾರೆ ಎಂದು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ವಿರೋಧ ಪಕ್ಷದ ನಾಯಕರು ಮುಖ್ಯಮಂತ್ರಿಗಳ ಬಗ್ಗೆ ನಾನು ಗಡಸು ಇಲ್ಲಿ ಎಂದು ಹೇಳುತ್ತಿದ್ದಾರೆ. ನಾನು ಪ್ರಯತ್ನ ಪಡುತ್ತಿದ್ದೇನೆ. ಆದರೆ ಅವರು ಗಡಸು ಆಗತಕ್ಕಂಥ ವ್ಯವಸ್ಥೆ ಮಾಡಿಕೊಳ್ಳುತ್ತಿಲ್ಲ. ಆ ವ್ಯವಸ್ಥೆ ಇರುವುದರಿಂದ ಅದು ಆಗುತ್ತಿಲ್ಲ. ನೀವು ಕೂಡ ಅಷ್ಟೇ, ನಿಮ್ಮದೂ ಕೂಡ ಗಡಸುತನ ಹೋಗಿಬಿಟ್ಟಿದೆ. ಅವರ ಮೇಲೆ ಪರಿಸ್ಥಿತಿ

ಹಾಗಿದೆ. ಅಂದರೆ ಅದು ಒಬ್ಬೊಬ್ಬ ಮುಖ್ಯಮಂತ್ರಿಗಳ ಲಕ್ಷಣ, ಅದಕ್ಕೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ. ಗಡಸುತನ, ಗಂಡಸುತನ ಎಲ್ಲರಿಗೂ ಒಂದೆ ಅದನ್ನು ಪಟೇಲರಿಗೆ ಕೇಳಿ ಗೊತ್ತಾಗುತ್ತದೆ.

ಅಧ್ಯಕ್ಷರು: ಪಟೇಲರಿಗೆ ಏಕೆ ಕೇಳೊಣ.

ಶ್ರೀ ವಾಟಾಳ್ ನಾಗರಾಜ್: ಇಲ್ಲ ನಂಜೇಗೌಡರಿಗೆ ಕೇಳಿ.

ಅಧ್ಯಕ್ಷರು: ಏಕೆ ಮತ್ತೆ ಮತ್ತೆ ನಂಜೇಗೌಡರಿಗೆ ಕೇಳೋದು, ನಿಮ್ದೇ ಹೇಳಿ.

ಶ್ರೀ ವಾಟಾಳ್ ನಾಗರಾಜ್: ನಮ್ಮ ವಿಚಾರ ತಮಗೆ ಗೊತ್ತಿದೆಯಲ್ಲಿ ಅಧ್ಯಕ್ಷರೆ.

ಶ್ರೀ ಹೆಚ್.ಡಿ. ಬಸವರಾಜ್: ಮಾನ್ಯ ಅಧ್ಯಕ್ಷರೆ ಇವಾಗ ನೀವು ಹೇಳಬೇಕು.

ಅಧ್ಯಕ್ಷರು: ನಾನು ದೇವರಿಗೆ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಹೇಳುವುದೇನೆಂದರೆ ಶಾಸಕರುಗಳು, ಕ್ಷೇತ್ರಾಭಿವೃದ್ಧಿ ಕಛೇರಿ ವಾಹನ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ಹಾಗೂ ಹತ್ತು ದಿವಸಗಳ ಕಾಲ ಸ್ಪಷ್ಟವಾಗಿ ಹೇಳಿದ್ದಾರೆ. ನಾನು 1986ನೇ ಇಸವಿಯಲ್ಲಿ ಸುತ್ತೋಲೆ ಹೊರಡಿಸಿದ್ದಾರೆ. ತಮಗೆ ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ, ರಾಜಕೀಯವಾಗಿ ಹೇಳುತ್ತಿಲ್ಲ. ಇವೊತ್ತು ಅತ್ಯಂತ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಯಾವ ಕ್ಷೇತ್ರದಲ್ಲಿ ಹೋದರೂ ಆ ಕ್ಷೇತ್ರದ ಶಾಸಕರು ಎಂದರೆ ಬಹಳ ಅಸಾಧ್ಯವಾಗಿದೆ, ಒಬ್ಬರನ್ನು ಕರೆದರೆ ನಾನು ಜಿಲ್ಲಾಧಿಕಾರಿಗಳಿಗೆ ಭೇಟಿ ಮಾಡಬೇಕು ಎಂದು, ಒಬ್ಬರು ಹೇಳುತ್ತಾರೆ. ಇನ್ನೊಬ್ಬರು ನಾಮಕರಣಕ್ಕೆ ಹೋಗಬೇಕು ಎಂದು ಹೇಳುತ್ತಾರೆ. ಇನ್ನೊಬ್ಬರು ತಿಥಿಗೆ ಹೋಗಬೇಕು ಎಂದು ಹೇಳುತ್ತಾರೆ. ಅವರ ತಿಥಿ, ನಾಮಕರಣ ಜಿಲ್ಲಾಧಿಕಾರಿಗಳು ಇವರನ್ನು ಕಟ್ಟಿಕೊಂಡು ನಾವು ಎಲ್ಲಿಗೆ ಹೋಗಬೇಕು. ನಮ್ಮ ಪರಿಸ್ಥಿತಿ ಏನು?

ಶ್ರೀ ಜೆ.ಹೆಚ್. ಪಟೇಲ್: ಈ ಸರ್ಕಾರಿ ಆಜ್ಞೆ ಏನು ಇದೆ ಅದನ್ನು ಪಾಲಿಸದಿದ್ದರೆ ಆ ಅಧಿಕಾರಿಗಳ ವಿರುದ್ಧ ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತದೆ, ಮತ್ತು 1986ರಲ್ಲಿ ಅದು ಬಂದಿದೆ. 1991ನೇ ಇಸವಿಯಿಂದ 1996ನೇ ಇಸವಿಯವರೆಗೆ ಏನಾಗಿತ್ತು, ಆವಾಗ ಎಲ್ಲಾ ಸರಿಯಾಗಿ ಕೆಲಸ ಮಾಡುತ್ತಿತ್ತಾ?

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ವಾಟಾಳ್ ನಾಗರಾಜ್‌ರವರು ಸರ್ಕಾರದವರು 1986ನೇ ಸಾಲಿನಲ್ಲಿ ಹೊರಡಿಸಿದಂಥ ಒಂದು ಸುತ್ತೋಲೆಯ ಬಗ್ಗೆ ಮಾತನಾಡುತ್ತಿದ್ದಾರೆ. ಹತ್ತು ದಿವಸಗಳ ಕಾಲ ವಾಹನ ಮತ್ತು ಸರ್ಕಾರಿ ಅಧಿಕಾರಿಗಳು ಶಾಸಕರೊಂದಿಗೆ ಪ್ರವಾಸ ಮಾಡಬೇಕು ಎಂದು ಪ್ರಸ್ತಾಪ ಮಾಡಿದ್ದಾರೆ. ಈಗ ನನ್ನ ಪ್ರಶ್ನೆ ಇಷ್ಟೇ ಒಂದು ತಾಲ್ಲೂಕಿನಲ್ಲಿ ಎರಡು ಅಥವಾ ಎರಡಕ್ಕಿಂತ ಹೆಚ್ಚು ಕ್ಷೇತ್ರಗಳು ಬರುತ್ತವೆ. ಆ ಎಲ್ಲಾ ಅಧಿಕಾರಿಗಳು ನಮ್ಮ ಜೊತೆ ಪ್ರವಾಸ ಕೈಗೊಂಡರೆ ಅಭಿವೃದ್ಧಿ ಕೆಲಸ ಕಾರ್ಯಗಳು ಹೇಗೆ ಆಗಬೇಕು.

ಅಧ್ಯಕ್ಷರು: ಅದನ್ನೂ ಕೂಡ ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ 1986ನೇ ಸಾಲಿನಲ್ಲಿ ಏನೊಂದು ಸುತ್ತೋಲೆ ಹೊರಡಿಸಿದ್ದೀರಿ ಅದರ ಬಗ್ಗೆ ಒಂದು ಸ್ಪಷ್ಟವಾದ ವಿಚಾರವನ್ನು ಕೊಡತಕ್ಕಂಥದ್ದು.

ಅಧ್ಯಕ್ಷರು: ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳೊಂದಿಗೆ ಚರ್ಚಿಸಿ ಏತಕ್ಕೆ ಇದು ಅನುಷ್ಠಾನಗೊಂಡಿಲ್ಲ, ಅದರಲ್ಲಿ ನ್ಯೂನತೆಗಳು ಏನು ಇವೆ ಅದನ್ನು ಸರಿದೂಗಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚನೆ ನೀಡುತ್ತಾರೆಂದು ಹೇಳಿದ್ದಾರೆ. ಇದನ್ನು ಇಲ್ಲಿಗೆ ಮುಕ್ತಾಯ ಮಾಡೋಣ.

ಶ್ರೀ ಜುಲ್ಫಿಕರ್ ಹಶ್ಮಿ: ಸರ್, ನನ್ನದೊಂದು ಅಹವಾಲು ಇದೆ.

ಅಧ್ಯಕ್ಷರು: ಹಶ್ಮಿಯವರೇ, ಇದು ಪ್ರಶ್ನೋತ್ತರ ವೇಳೆಯಲ್ಲ, ಇದು ಶೂನ್ಯ ವೇಳೆ, ಬೆಳಿಗ್ಗೆ ಕೆಲವರು ಕೆಲವೊಂದು ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಕೇಳಿದ್ದಾರೆ. ಅವರಿಗೆ ಅವಕಾಶ ನೀಡುತ್ತಿದ್ದೇನೆ. ನೀವು ಮಾತನಾಡಬೇಕಾದರೆ ಲಿಖಿತ ಮೂಲಕ ಕೇಳಿ. ಅದನ್ನು ಬಿಟ್ಟು ನೇರವಾಗಿ ಅಲ್ಲಿ ಎದ್ದು ನಿಂತು ಮಾತನಾಡುವುದು ಅಲ್ಲ. ಅದಕ್ಕೆ ಪ್ರೊಸೀಜರ್ ಇದೆ. ದಯಮಾಡಿ ಮೊದಲು ಅದನ್ನು ಕಲಿತುಕೊಳ್ಳಿ.

ಶ್ರೀ ಜಿ.ವಿ. ಶಿವಪ್ಪ: ಮಾನ್ಯ ಮಂತ್ರಿಗಳು ಏನು ಉತ್ತರ ಕೊಟ್ಟರು ಅದು ಸರಿಯಲ್ಲ, ಮಾನ್ಯ ಮುಖ್ಯಮಂತ್ರಿಗಳಿಗೂ ಇದು ಗೊತ್ತಿದೆ. ಅಧಿಕಾರಿಗಳ ಸಂಕಟವನ್ನು ನಾವು ಅರ್ಥ ಮಾಡುಕೊಳ್ಳಬೇಕು. ಅಧಿಕಾರಿಗಳು ಏನು ಹೇಳುತ್ತಾರೆ. ಅಂದರೆ ನಾವು ಯಾರ ಮಾತು ಕೇಳಬೇಕೆಂದು ತೀರ್ಮಾನವಾಗಲಿಲ್ಲ ಎಂದು. ಜಿಲ್ಲಾಪರಿಷತ್ತಿನ ವ್ಯಾಪ್ತಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಹೇಳುತ್ತಾರೆ ಜಿಲ್ಲಾಪರಿಷತ್ತು ಏನು ಹೇಳುತ್ತದೆ ಅಷ್ಟು ಮಾತ್ರ ನಾನು ಕೇಳುತ್ತೇನೆಂದು ಹೇಳುತ್ತಾರೆ.

ಅಧ್ಯಕ್ಷರು:- 1986 ರಲ್ಲಿ ವ್ಯವಸ್ಥೆ ಇರಲಿಲ್ಲ, ಈಗ ಈ ವ್ಯವಸ್ಥೆ ಬಂದಿದೆ. ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ಅಧಿಕಾರಿಗಳಿಗೆ ಹೇಳತಕ್ಕ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದಾರೆ. ಇನ್ನು ಆ ವಿಚಾರದಲ್ಲಿ ಚರ್ಚೆ ಬೇಕಾಗಿಲ್ಲ, ದಯವಿಟ್ಟು ಎಲ್ಲರೂ ಸಹಕರಿಸಿ.

(ಊ) ದೇವನಹಳ್ಳಿಯಲ್ಲಿ ಆಗತಕ್ಕ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಬಗ್ಗೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ನಾನು ಇವತ್ತಿನ ಪತ್ರಿಕೆಯಲ್ಲಿ ನೋಡಿದೆ, ಮತ್ತು ಪತ್ರಿಕಾ ಘೋಷ್ಠಿಯಲ್ಲೂ ಕೂಡ ಈ ವಿಷಯ ಪ್ರಸ್ತಾಪವಾಗಿದೆ. ಮಾನ್ಯ ಸಿ.ಎಂ. ಇಬ್ರಾಹಿಂ ಅವರು ಹೇಳಿದ್ದಾರೆ, ದೇವನ ಹಳ್ಳಿಯಲ್ಲಿ ಆಗತಕ್ಕ ಇಂಟರ್ ನ್ಯಾಷನಲ್ ಏರ್ ಪೋರ್ಟ್‌ನ್ನು ಬಿ.ಒ.ಒ.ಟಿ. ಯೋಜನೆಯ ಅಡಿಯಲ್ಲಿ ಮಾಡುವುದಕ್ಕೆ ಒಂದು ವೇಳೆ ಟಾಟಾ ಕಂಪನಿಯವರು ಒಪ್ಪದೆ ಹೋದಾಗ ಏರ್‌ಪಾರ್ಟ್ ಅಥಾರಿಟಿ ಆಫ್ ಇಂಡಿಯಾ ಅವರೆ ಈ ಕೆಲಸ ಪ್ರಾರಂಭ ಮಾಡುತ್ತಾರೆ ಎಂಬ ಮಾತನ್ನು ಅವರು ಹೇಳಿದ್ದಾರೆ. ದೇವನಹಳ್ಳಿಯಲ್ಲಿ ಈ ಏರ್‌ಪೋರ್ಟ್ ಬಂದೇ ಬರುತ್ತದೆ, ಇದಕ್ಕೆ ಯಾವ